# ಐದನೆಯ ತರಗತಿ (ದ್ವಿತೀಯ ಭಾಷೆ ಕನ್ನಡ)

ಗೌರವಾನ್ವಿತ ಶಿಕ್ಷಕ ಬಾಂಧವರೆ,

ಸೇತುಬಂಧ ಕಾರ್ಯಕ್ರಮವು ಶಿಕ್ಷಕರಿಗೆ ಚಿರಪರಿಚಿತವಾಗಿದ್ದರೂ ಈ ಸಾಲಿನ ಸೇತುಬಂಧ ನವೀನ ಹಾಗೂ ಸವಾಲಿನಿಂದ ಕೂಡಿದೆ. ಕೋವಿಡ್-19ರ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಶಾಲೆಗಳು ಸಮರ್ಪಕವಾಗಿ ನಡೆದಿಲ್ಲವಾದ ಕಾರಣ ಈ ಸಾಲಿನ ಶೈಕ್ಷಣಿಕ ವರ್ಷದ ಸೇತುಬಂಧ ಕಾರ್ಯಕ್ರಮವು ಶಿಕ್ಷಕರಾದ ನಮಗೆ ಸವಾಲಾಗಿದೆ. ವಿದ್ಯಾರ್ಥಿಗಳು ಆಯಾ ತರಗತಿಯಲ್ಲಿ ಗಳಿಸಬೇಕಾದ ಸಾಮರ್ಥ್ಯವನ್ನು ಗಳಿಸಲು ಕಷ್ಟಸಾಧ್ಯವಾಗಿರುವುದರಿಂದ ಕಲಿಕಾ ಕೊರತೆ ಉಂಟಾಗಿರುತ್ತದೆ. ಇದನ್ನು ಸರಿದೂಗಿಸುವ ನಿಟ್ಟಿನಲ್ಲಿ ಈ ಸಾಹಿತ್ಯವು ಪೂರಕವಾಗಿರುತ್ತದೆ.

ಶಿಕ್ಷಕರು, ಮುಂದಿನ ಮೂವತ್ತು ದಿನಗಳ 'ಬಂಧ' ಸಾಹಿತ್ಯದಲ್ಲಿ ನೀಡಿರುವ ಸೂಚನೆಯಂತೆ ಚಟುವಟಿಕೆಗಳನ್ನು ನಡೆಸಿ ವಿದ್ಯಾರ್ಥಿಗಳನ್ನು ಸದರಿ ತರಗತಿಗೆ ಸಿದ್ಧಗೊಳಿಸಬೇಕು. ಈ ಬೋಧನಾ ಕಲಿಕಾ ಪ್ರಕ್ರಿಯೆಯು ಶಿಶು ಕೇಂದ್ರಿತ, ಚಟುವಟಿಕೆ ಆಧಾರಿತ ಮತ್ತು ಸಂತಸದಾಯಕ ಕಲಿಕೆಗೆ ಒತ್ತು ನೀಡುವಂತಿರಬೇಕು. ಇದಕ್ಕಾಗಿ ಶಿಕ್ಷಕರು ಉತ್ತಮ ರೀತಿಯಲ್ಲಿ ಪೂರ್ವ ಸಿದ್ಧತೆ ಮಾಡಿಕೊಳ್ಳುವುದು ಅಗತ್ಯ ಮತ್ತು ಅತ್ಯಂತ ಅನಿವಾರ್ಯವಾಗಿದ್ದು ನಿಮ್ಮ ಸೃಜನಶೀಲತೆಗೆ ಪೂರ್ಣ ಅವಕಾಶವಿರುತ್ತದೆ.

- ಸೇತುಬಂಧ ಕಾರ್ಯಕ್ರಮದ ಈ ಸಾಹಿತ್ಯವನ್ನು ಶಿಕ್ಷಕರು ಓದಿ, ಅರ್ಥೈಸಿಕೊಳ್ಳುವುದು.
- ಇಲ್ಲಿನ ಚಟುವಟಿಕೆಗಳು ಕೇವಲ ಮಾದರಿಯಷ್ಟೆ. ಶಿಕ್ಷಕರು ವಿಭಿನ್ನವಾದ ರೀತಿಯಲ್ಲಿ ಸೃಜನಾತ್ಮಕವಾಗಿ ಚಟುವಟಿಕೆಗಳನ್ನು ರೂಪಿಸಿಕೊಳ್ಳುವುದು.
- ಐದನೆಯ ತರಗತಿಯ ಈ ಸಾಹಿತ್ಯದಲ್ಲಿ ಮೂರು ಮತ್ತು ನಾಲ್ಕನೆಯ ತರಗತಿಯ ಅಪೇಕ್ಷಿತ ಕಲಿಕಾಫಲ ಹಾಗೂ ಕಲಿಕಾಂಶಗಳನ್ನು ಗಮನಿಸಿ ಚಟುವಟಿಕೆಗಳನ್ನು ರೂಪಿಸಲಾಗಿದೆ.

## ಸೇತುಬಂಧ ಸಾಹಿತ್ಯ

ತರಗತಿ : 5 ವಿಷಯ : ಕನ್ನಡ (ದ್ವಿತೀಯ ಭಾಷೆ) ಬಂಧ

| ದಿನ | ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಗಳ ನಿರ್ವಹಣೆಗಾಗಿ ಸೂಚನೆಗಳು |
|---|---|---|---|---|
| 1 | ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸಗೀತೆ/ಜನಪದ ಗೀತೆಗಳನ್ನು ಆಲಿಸಿ ಹಾಡುವರು ಹಾಗೂ ಆನಂದಿಸುವರು | ಆಲಿಸಿದ ಸರಳ ಪ್ರಾಸಗೀತೆಗಳನ್ನು ಹಾಡುತ್ತಾರೆ. | * ಪ್ರಾಸ ಹಾಡು- ಮಜಾ ನೋಡು | * ಸರಳ ಪ್ರಾಸಗೀತೆಗಳನ್ನು ಧ್ವನಿ ಸುರುಳಿಯ ಮೂಲಕ ಕೇಳಿಸುವುದು ಮತ್ತು ವಿದ್ಯಾರ್ಥಿಗಳಿಂದ ಸಾಮೂಹಿಕವಾಗಿ ಹಾಡಿಸುವುದು.<br>* ಪ್ರಾಸಪದಗಳನ್ನು ಪಟ್ಟಿ ಮಾಡಿಸುವುದು/ಹೇಳಿಸುವುದು<br>* ದಿನಪತ್ರಿಕೆಗಳಲ್ಲಿ ಬರುವ ಸರಳ ಪ್ರಾಸ ಪದ ಸಂಗ್ರಹಿಸಿ ಹಾಡಿಸುವುದು |
| 2 | | ಆಲಿಸಿದ ಜನಪದ ಗೀತೆಗಳಲ್ಲಿರುವ ಗ್ರಾಮೀಣ ಸೊಗಡನ್ನು ಆಲಿಸಿ ಆನಂದಿಸುತ್ತಾರೆ. | * ಜನಪದ ಹಾಡು – ಹಳ್ಳಿಯ ಸೊಗಡು | * ಜನಪದಗೀತೆಗಳನ್ನುಕೇಳಿಸುವುದು .ಮಕ್ಕಳಿಂದ ಸಾಮೂಹಿಕವಾಗಿ ಹಾಡಿಸುವುದು<br>* ಸಂಗ್ರಹಿಸಿದ ಜನಪದ ತ್ರಿಪದಿಗಳನ್ನು ಮಕ್ಕಳಿಗೆ ನೀಡಿ ಪ್ರತಿ ವಿದ್ಯಾರ್ಥಿಯಿಂದಲೂ ಹಾಡಿಸುವುದು |
| 3 | ಜನಪ್ರಿಯ ಸರಳ ಕಥೆಗಳನ್ನು ಆಲಿಸುವುದರ ಜತೆಗೆ ಅರ್ಥ ಮಾಡಿಕೊಳ್ಳುವರು. | ಕಥೆಯನ್ನುಆಲಿಸಿ ಸರಳ ಪ್ರಶ್ನೆಗಳಿಗೆ ಉತ್ತರಿಸುತ್ತಾರೆ | ಕೇಳು-ಕಥೆ | * ಶಿಕ್ಷಕರು/ ದೃಕ್ಶ್ರವಣ ಉಪಕರಣ ಬಳಸಿ ಕಥೆ ಹೇಳುವುದು. ಕಥೆಗೆ ಸಂಬಂಧಿಸಿದಂತೆ ಸರಳ ಪ್ರಶ್ನೆಕೇಳಿ ಉತ್ತರ ಪಡೆಯುವುದು. |
| 4 | | ಕಥೆಯಲ್ಲಿ ಬರುವ ಪ್ರಮುಖ ಪಾತ್ರ ಹಾಗೂ ಪದಗಳನ್ನು ಗುರುತಿಸಿ ಹೇಳುತ್ತಾರೆ | ಕಥೆ ಆಲಿಸು – ಪದ ಪೇರಿಸು | * ಕಥೆಯಲ್ಲಿ ಬರುವ ಪಾತ್ರಗಳನ್ನು/ ಪದಗಳನ್ನು ಹೇಳಿಸುವುದು.<br>* ಸಂಕ್ಷಿಪ್ತವಾಗಿ ಪಾತ್ರಗಳ ಸಂಭಾಷಣೆ ಹೇಳಿಸುವುದು . |
| 5 | ಚಿತ್ರವನ್ನು ನೋಡಿ ಪರಿಚಯ ಮಾಡುವರು | ಪ್ರದರ್ಶಿಸಿದ ಚಿತ್ರವನ್ನು ವೀಕ್ಷಿಸಿ ಚಿತ್ರದಲ್ಲಿರುವ | ಚಿತ್ರನೋಡು- ಮಾತನಾಡು | * ವಿವಿಧ ಪ್ರಾಣಿ, ಪಕ್ಷಿ , ವಸ್ತು, ಕೆಲಸವನ್ನು ಸೂಚಿಸುವ ಚಿತ್ರಗಳನ್ನು ತೋರಿಸಿ ಅವುಗಳನ್ನು ಗುರುತಿಸುವುದು. ನಂತರ ಚಿತ್ರಕ್ಕೆ ಪೂರಕವಾಗಿ ಒಂದೆರಡು |

| | | | | |
|---|---|---|---|---|
| | | ವಸ್ತು/ಪ್ರಾಣಿ ಇತ್ಯಾದಿ ಗುರುತಿಸುವರು | | ವಾಕ್ಯ ಮಾತನಾಡಿಸುವುದು.<br>ಉದಾಹರಣೆಗೆ ಕೋತಿ ಚಿತ್ರ : ಇದು ಕೋತಿ. ಕೋತಿಯು ಮರದ ಮೇಲೆ ರೆಂಬೆಯಿಂದ ರೆಂಬೆಗೆ ಹಾರುತ್ತದೆ. |
| 6 | | ತೋರಿಸಿದ ಚಿತ್ರಸರಣಿಯನ್ನು ವೀಕ್ಷಿಸಿ ಅಲ್ಲಿರುವ ಸನ್ನಿವೇಶವನ್ನು ತನ್ನ ಧಾಟಿಯಲ್ಲಿ ಸ್ಪಷ್ಟವಾಗಿ ಹೇಳುತ್ತಾರೆ. | ಚಿತ್ರ-ಕಥೆ | * ಚಿತ್ರಸರಣಿ ನೋಡಿ ತನ್ನದೇ ವಾಕ್ಯಗಳಲ್ಲಿ ಸನ್ನಿವೇಶ ಊಹಿಸಿ ಹೇಳಲು ಪ್ರೇರೇಪಿಸುವುದು.ವಿದ್ಯಾರ್ಥಿಗಳ ವಾಕ್ಯರಚನಾ ಸಾಮರ್ಥ್ಯವನ್ನು ಗುರುತಿಸುವುದು. |
| 7 | ಸ್ಪಷ್ಟ ಉಚ್ಚಾರಣೆಯೊಂದಿಗೆ ನಿರರ್ಗಳವಾಗಿ ಮಾತನಾಡುವರು | ನೋಡಿದ ವಸ್ತುಗಳ ಬಗ್ಗೆ ವಿವರಿಸುತ್ತಾರೆ | ವಸ್ತು-ವಾಚನ | * ಶಾಲೆಯಲ್ಲಿ ಲಭ್ಯ ಇರುವ ಕೆಲವು ವಸ್ತುಗಳನ್ನು ಒಂದೆಡೆ ಜೋಡಿಸುವುದು. ವಿದ್ಯಾರ್ಥಿಯು ತನಗೆ ಇಷ್ಟವಾದ ವಸ್ತುವಿನ ಬಗ್ಗೆ ಮಾತನಾಡುವಂತೆ ಹೇಳುವುದು<br>* ವಿದ್ಯಾರ್ಥಿಯು ತನ್ನ ಮನೆಯಲ್ಲಿ ನೋಡಿದ ಯಾವುದಾದರೂ ವಸ್ತುವಿನ ಬಗ್ಗೆ ಪರಿಚಯ ಮಾಡಲು ಪ್ರೇರೇಪಿಸುವುದು. |
| 8 | | ಕೊಟ್ಟ ವಿಷಯವನ್ನು ಅರಿತು ಸಹಜವಾಗಿ ಮಾತನಾಡುವರು | ಆಶುಭಾಷಣ | * ಪರಿಚಿತವಿರುವ ಸರಳ ವಿಷಯಗಳ ಆಶುಭಾಷಣ ಸ್ಪರ್ಧೆಯನ್ನು ನಡೆಸುವುದು. |
| 9 | ಭಾವನೆಗೆ ತಕ್ಕಂತೆ ಸೂಕ್ತ ಧ್ವನಿ ವ್ಯತ್ಯಾಸದೊಂದಿಗೆ ಮಾತನಾಡುವರು | ಸೂಕ್ತ ಧ್ವನಿ ಏರಿಳಿತ, ಸ್ವರಭಾರದೊಂದಿಗೆ ಸಂಭಾಷಣೆ ಹೇಳುತ್ತಾರೆ | ಸರಳ ಸಂಭಾಷಣೆ | * ಸರಳ ಸಂಭಾಷಣೆಗಳನ್ನು ಮಕ್ಕಳಿಗೆ ನೀಡಿ, ಅದನ್ನು ಓದಿ ಅರ್ಥ ಮಾಡಿಕೊಂಡು ಭಾವಕ್ಕೆ ತಕ್ಕಂತೆ ಮಾತನಾಡಲು ಹೇಳುವುದು.<br>(ಹಿಂದಿನ ತರಗತಿಯ ಪಾಠದ ಸಂಭಾಷಣೆಗಳನ್ನು ಬಳಸಿಕೊಳ್ಳುವುದು) |
| 10 | | ತಾನು ನೋಡಿದ/ ಕೇಳಿದ ಘಟನೆಯನ್ನು ವಿವರಿಸುತ್ತಾರೆ | ಸರಳ ವಿಚಾರ | * ವಿದ್ಯಾರ್ಥಿಯು ತಾನು ನೋಡಿರುವ ಅಥವಾ ಇತರರಿಂದ ಕೇಳಿರುವ ಘಟನೆಯನ್ನು ತನ್ನ ಮಾತುಗಳಲ್ಲಿ ಹೇಳಲು ತಿಳಿಸುವುದು |

| | | | | |
|---|---|---|---|---|
| 11 | ಸರಳಪದಗಳನ್ನು ತಪ್ಪಿಲ್ಲದೆ ಓದುವರು | ವರ್ಣಮಾಲೆಯ ಅಕ್ಷರಗಳು, ಗುಣಿತಾಕ್ಷರ ಮತ್ತು ಸಂಯುಕ್ತಾಕ್ಷರಗಳ ನಡುವಿನ ವ್ಯತ್ಯಾಸವನ್ನು ಅರಿತು ಸ್ಪಷ್ಟವಾಗಿ ಉಚ್ಚರಿಸುತ್ತಾರೆ. | ಅಕ್ಷರ ನೋಡು- ಉಚ್ಚಾರ ಮಾಡು | * ವರ್ಣಮಾಲೆ, ಗುಣಿತಾಕ್ಷರ ಹಾಗೂ ಸಂಯುಕ್ತಾಕ್ಷರದ ಮಿಂಚುಪಟ್ಟಿಯನ್ನು ನೀಡಿ ಸ್ಪಷ್ಟವಾಗಿ ಉಚ್ಚರಿಸಲು ನಿರ್ದೇಶನವನ್ನು ನೀಡುವುದು.<br>* ಅಕ್ಷರಗಳ ಉಚ್ಚಾರಣಾ ಕ್ರಮ ಮತ್ತು ಧ್ವನ್ಯಂಗಗಳನ್ನು ಪರಿಚಯಿಸಿ, ಅಕ್ಷರಗಳನ್ನು ಸ್ಪಷ್ಟವಾಗಿ ಉಚ್ಚರಿಸಲು ಮಾರ್ಗದರ್ಶನ ನೀಡುವುದು. |
| 12 | | ಎರಡು ಅಥವಾ ಮೂರು ಅಕ್ಷರಗಳನ್ನೊಳಗೊಂಡ ಪದಗಳನ್ನು ಓದುತ್ತಾರೆ | ಅಕ್ಷರ ಸರಪಳಿ<br><br>ಪದಗಳನ್ನು ಓದಿಸುವುದು | * ಶಿಕ್ಷಕರು ನೀಡಿರುವ ಅಕ್ಷರಗಳಲ್ಲಿ ವಿದ್ಯಾರ್ಥಿಗಳಿಂದ ಸರಳ ಪದಗಳನ್ನು ರಚಿಸಿ ಓದಿಸುವುದು. ಉದಾ- ವಿಜಯನಗರ<br>ವಿಜಯ<br>ನಗರ<br>ಜಯ<br>ನಗ<br>ಗಜ<br>ಜನ…ಈ ಮಾದರಿಯಂತೆ ಅಕ್ಷರಗಳನ್ನು ನೀಡಿ ಪದಗಳನ್ನು ರಚಿಸುವಂತೆ ಸಲಹೆ ನೀಡುವುದು.<br>* ಹಿಂದಿನ ತರಗತಿಯ ಪಾಠಗಳಲ್ಲಿ ಇರುವ ಎರಡು ಅಥವಾ ಮೂರು ಅಕ್ಷರದ ಪದಗಳ ಪಟ್ಟಿ ಮಾಡಿಸುವುದು. ನಂತರ ಅವುಗಳನ್ನುಓದಿಸುವುದು |

| | | | | |
|---|---|---|---|---|
| 13 | ಸರಳ ವಾಕ್ಯಗಳನ್ನು ನಿರರ್ಗಳವಾಗಿ ಓದುವರು. | ಸರಳ ಪದಗಳನ್ನು ಬಳಸಿ ಸರಳ ವಾಕ್ಯಗಳನ್ನು ರಚಿಸಿ ಓದುತ್ತಾರೆ. | ಪದ ಜೋಡಿಸು – ವಾಕ್ಯ ರಚಿಸು | * ಶಿಕ್ಷಕರು ಮಾದರಿಯಂತೆ ಕೆಲವು ಪದಗಳನ್ನು ನೀಡುವುದು. ವಿದ್ಯಾರ್ಥಿಗಳು ಈ ಪದಗಳನ್ನು ಸರಿಯಾಗಿ ಜೋಡಿಸಿ ಅರ್ಥಪೂರ್ಣವಾದ ವಾಕ್ಯವನ್ನು ರಚಿಸಿ ಓದಲು ಪ್ರೇರೇಪಿಸುವುದು.<br>ಮಾದರಿ : ಕಾಡಿಗೆ / ಹೋದನು / ರಮೇಶನು<br>ಕುವೆಂಪುರವರು / ರಚಿಸಿದರು / ನಾಡಗೀತೆಯನ್ನು<br>ಹಬ್ಬ / ದೀಪಗಳ / ದೀಪಾವಳಿ |
| 14 | | ಸರಳ ಪದಗಳಿಗೆ ಸ್ವಂತವಾಕ್ಯವನ್ನು ರಚಿಸಿ ಓದುತ್ತಾರೆ. | ಪದಕ್ಕೊಂದು ವಾಕ್ಯ | * ಹಬ್ಬ, ಕಡಲು, ಜಲಪಾತ - ಈ ರೀತಿಯ ಸರಳ ಪದಗಳನ್ನು ನೀಡಿ, ಆ ಪದಗಳಿಗೆ ವಿದ್ಯಾರ್ಥಿಗಳಿಂದ ಸರಳ ವಾಕ್ಯಗಳನ್ನು ರಚಿಸಿ ಓದಿಸುವುದು |
| 15 | | ಧ್ವನಿ ವ್ಯತ್ಯಾಸವಿರುವ ಪದಗಳನ್ನು ಒಳಗೊಂಡ ವಾಕ್ಯಗಳನ್ನು ತಪ್ಪಿಲ್ಲದೆ ಓದುತ್ತಾರೆ. | ಧ್ವನಿ ವ್ಯತ್ಯಾಸ – ಓದುವ ಹವ್ಯಾಸ | * ಶಿಕ್ಷಕರು ಧ್ವನಿ ವ್ಯತ್ಯಾಸವಿರುವ ಸರಳ ಪದಗಳನ್ನೊಳಗೊಂಡ ವಾಕ್ಯಗಳನ್ನು ಸಂಗ್ರಹಿಸಿ ಮಕ್ಕಳಿಂದ ಓದಿಸುವುದು.<br>ಉದಾ : ಅಣ್ಣನು ಅನ್ನವನ್ನು ಉಣ್ಣುತ್ತಾನೆ.<br>ಬಾಲೆಯ ಬಳಿ ಬಾಳೆಹಣ್ಣಿದೆ.<br>ಹಕ್ಕಿಯು ಅಕ್ಕಿಯನ್ನು ತಿನ್ನುತ್ತದೆ. |
| 16 | ಸರಳ ಸೂಚನೆಗಳನ್ನು ಅರ್ಥ ಮಾಡಿಕೊಂಡು ಸೂಕ್ತ ಸ್ವರಭಾರದೊಂದಿಗೆ ಸರಾಗವಾಗಿ, ಗಟ್ಟಿಯಾಗಿ ಓದುವರು. | 1. ಸೂಚನಾ ಫಲಕದಲ್ಲಿರುವ ಸೂಚನೆಗಳನ್ನು ಸ್ಪಷ್ಟವಾಗಿ ಅರ್ಥೈಸಿ ಓದುತ್ತಾರೆ. | ಸೂಚನೆ ಓದೋಣ – ಪಾಲನೆ ಮಾಡೋಣ | * ಶಿಕ್ಷಕರು ಕೆಲವು ಸರಳ ಸೂಚನೆಗಳನ್ನು ಒಳಗೊಂಡ ಸೂಚನಾ ಫಲಕಗಳನ್ನು ವಿದ್ಯಾರ್ಥಿಗಳಿಂದ ತಯಾರಿಸಿ ಓದಿಸುವುದು.<br>ಉದಾ : ಶೌಚಾಲಯ ಬಳಸಿ<br>ಶಾಲೆಯ ಮುಂಭಾಗ ಕಸ ಚೆಲ್ಲಬೇಡಿ<br>ನಮ್ಮ ಪ್ರತಿಭೆಯನ್ನು ಪ್ರೋತ್ಸಾಹಿಸಿ<br>ರಸ್ತೆ ನಿಯಮ ಪಾಲಿಸಿ |

| | | | | |
|---|---|---|---|---|
| 17 | | ಸರಳ ಕಥೆ, ಕವನ ಮತ್ತು ಚುಟುಕುಗಳನ್ನು ಓದುತ್ತಾರೆ. | ವಾಚನದೆಡೆ ನನ್ನ ನಡೆ | * ಜನಪ್ರಿಯ ಸರಳ ಕಥೆಗಳನ್ನು ನೀಡಿ ಓದಿಸುವುದು.<br>* ಜನಪ್ರಿಯ ಕವಿಗಳ ಸರಳ ಕವನಗಳನ್ನು ನೀಡಿ ಓದಿಸುವುದು<br>* ಜನಪ್ರಿಯ ಸರಳ ಚುಟುಕುಗಳನ್ನು ಸಂಗ್ರಹಿಸಿ ವಿದ್ಯಾರ್ಥಿಗಳಿಂದ ಓದಿಸುವುದು |
| 18 | | ಅಕ್ಷರ ಉಚ್ಚಾರಣೆಯನ್ನು ಗಮನಿಸಿ ಸೂಕ್ತ ಧ್ವನಿ ಏರಿಳಿತದೊಂದಿಗೆ ಗಟ್ಟಿಯಾಗಿ ಓದುತ್ತಾರೆ. | ಗಟ್ಟಿ ಓದು – ಸ್ಪಷ್ಟ ಓದು | * ಶಿಕ್ಷಕರು ಪಾಠದ ಯಾವುದಾದರೂ ಒಂದು ಭಾಗವನ್ನು ವಿದ್ಯಾರ್ಥಿಗಳಿಗೆ ನೀಡಿ ಗಟ್ಟಿಯಾಗಿ ಓದಲು ಸೂಚಿಸಿ, ಮಕ್ಕಳ ಉಚ್ಚಾರಣೆ ಸ್ಪಷ್ಟತೆಯನ್ನು ಗಮನಿಸುವುದು.<br>* ದಿನಪತ್ರಿಕೆಯ ಶೀರ್ಷಿಕೆಗಳನ್ನು ಗಟ್ಟಿಯಾಗಿ ಓದಿಸುವುದು. |
| 19 | | ಮುದ್ರಿತ ಅಕ್ಷರಗಳನ್ನು ಗಮನಿಸಿ ಪದಗಳನ್ನು ತಪ್ಪಿಲ್ಲದೆ ಓದುತ್ತಾರೆ. | ಮುದ್ರಿತ ಪತ್ರ - ಓದುವೆ ಮಿತ್ರ | * ಲಗ್ನ ಪತ್ರಿಕೆ, ದಿನಪತ್ರಿಕೆ, ಸರಳ ಕಥೆ ಪುಸ್ತಕ ಇತ್ಯಾದಿಗಳಲ್ಲಿ ಮುದ್ರಿತವಾಗಿರುವ ಪದಗಳನ್ನು, ವಾಕ್ಯಗಳನ್ನು ಗಟ್ಟಿಯಾಗಿ ಓದಿಸುವುದು. |
| 20 | ಅಕ್ಷರ ಮತ್ತು ಪದಗಳನ್ನು ಅಂದವಾಗಿ, ಸೂಕ್ತ ಗಾತ್ರ ಮತ್ತು ಅಂತರದಲ್ಲಿ ಬರೆಯುವರು. | ಕಾಪಿ ಪುಸ್ತಕದಲ್ಲಿ ಅಕ್ಷರಗಳನ್ನು ಎರಡು ಗೆರೆ ಸೇರಿಸಿ ಬರೆಯುತ್ತಾರೆ. | ನಕಲು ಮಾಡಿ – ಬರೆದು ನೋಡು | * ಮುದ್ರಿತ ಕನ್ನಡ ವರ್ಣಮಾಲೆಯ ಅಕ್ಷರಗಳನ್ನು ನೋಡಿ ಅದರಂತೆ ಕಾಪಿ ಪುಸ್ತಕದಲ್ಲಿ ಬರೆಯಲು ಮಾರ್ಗದರ್ಶಿಸುವುದು.<br>* ಶಿಕ್ಷಕರು ಕಪ್ಪುಹಲಗೆಯ ಮೇಲೆ ಬರೆದ ಅಕ್ಷರಗಳನ್ನು ಮಕ್ಕಳು ಕಾಪಿ ಪುಸ್ತಕದಲ್ಲಿ ನಕಲು ಮಾಡಲು ತಿಳಿಸುವುದು. |
| 21 | | ಪದಗಳನ್ನು ನೋಡಿ ಅಂದವಾಗಿ ಬರೆಯುತ್ತಾರೆ | ಪದ ನೋಡಿ – ಬರೆಯುವ ಮೋಡಿ | * ಪುಸ್ತಕದ ಆಯ್ದ ಪದಗಳನ್ನು ನೋಡಿ ಅಂದವಾಗಿ ತಪ್ಪಿಲ್ಲದೆ ಬರೆಯಲು ಸೂಚಿಸುವುದು<br>* ಗೋಡೆಬರೆಹ, ದಿನಪತ್ರಿಕೆಯಲ್ಲಿರುವ ಪದಗಳನ್ನು ನೋಡಿ ಬರೆಯಲು ತಿಳಿಸುವುದು. |

<table>
<tr><td>22</td><td rowspan="3">ಸರಳ ಪದ ಮತ್ತು ವಾಕ್ಯಗಳನ್ನು ಆಲಿಸಿ ತಪ್ಪಿಲ್ಲದೆ ಬರೆಯುವರು</td><td>ಆಲಿಸಿದ ಸರಳ ಪದಗಳನ್ನು ಕಾಗುಣಿತ ದೋಷವಿಲ್ಲದೆ ಬರೆಯುತ್ತಾರೆ.</td><td>ಉಕ್ತಲೇಖನ</td><td>* ಶಿಕ್ಷಕರು ಮಕ್ಕಳಿಗೆ ಸರಳ ಪದಗಳನ್ನು ಉಕ್ತಲೇಖನ ಹೇಳಿ ಬರೆಸುವುದು.<br>* ಸರಳ ಪ್ರಾಸ ಪದ್ಯಗಳ ಆಡಿಯೋ ಕೇಳಿ, ಅದರಲ್ಲಿ ಆಲಿಸಿದ ಪದಗಳನ್ನು ಸ್ಮರಿಸಿ ಬರೆಯುವಂತೆ ಮಾರ್ಗದರ್ಶಿಸುವುದು.</td></tr>
<tr><td>23</td><td>ಅಕ್ಷರಗಳನ್ನು ಬಳಸಿ ಅರ್ಥಪೂರ್ಣ ಪದಗಳನ್ನು ರಚಿಸುತ್ತಾರೆ.</td><td>ಪದ ರಚನೆ</td><td><table>
<tr><td>ಅ</td><td>ಲು</td><td>ಥ</td><td>ಳಿ</td><td>ನ</td></tr>
<tr><td>ಬ</td><td>ರ</td><td>ಗ</td><td>ಮ</td><td>ರಿ</td></tr>
<tr><td>ಗ</td><td>ತ</td><td>ಡು</td><td>ಸ</td><td>ಕಾ</td></tr>
</table>
ವಿದ್ಯಾರ್ಥಿಗಳಿಗೆ ಮಾದರಿಯಂತೆ ಅಕ್ಷರಗಳ ಕೋಷ್ಟಕವನ್ನು ನೀಡಿ, ಆ ಕೋಷ್ಟಕದಲ್ಲಿರುವ ಅಕ್ಷರಗಳನ್ನು ಬಳಸಿ ಅರ್ಥಪೂರ್ಣ ಪದಗಳನ್ನು ರಚಿಸಲು ಸೂಚಿಸುವುದು.</td></tr>
<tr><td>24</td><td>ಸರಳ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸುತ್ತಾರೆ</td><td>ವಾಕ್ಯ ರಚನೆ</td><td>* ಶಿಕ್ಷಕರು ವಿದ್ಯಾರ್ಥಿಗಳಿಗೆ ಕೆಲವು ಸರಳ ಪದಗಳನ್ನು ಹೇಳುವುದು. ವಿದ್ಯಾರ್ಥಿಗಳಿಗೆ ಆಲಿಸಿದ ಪದಗಳ ಅರ್ಥವನ್ನು ಗ್ರಹಿಸಿ ಸರಳ ವಾಕ್ಯಗಳನ್ನು ರಚಿಸುವಂತೆ ಮಾರ್ಗದರ್ಶಿಸುವುದು.<br>* ಶಿಕ್ಷಕರು ಸರಳವಾದ ಕಥೆಯೊಂದನ್ನು ಹೇಳುವುದು. ಆಲಿಸಿದ ಕಥೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ವಾಕ್ಯಗಳನ್ನು ರಚಿಸುವಂತೆ ಸೂಚಿಸುವುದು.</td></tr>
<tr><td>25</td><td>ಲೇಖನ ಚಿಹ್ನೆಗಳನ್ನು ಗಮನಿಸಿ ಬರೆಯುವರು</td><td>ಲೇಖನ ಚಿಹ್ನೆಗಳನ್ನು ಸರಿಯಾಗಿ ಗುರುತಿಸುತ್ತಾರೆ.</td><td>ಇವರು ಯಾರು ಬಲ್ಲಿರೇನು?</td><td>* ಶಿಕ್ಷಕರು ಲೇಖನ ಚಿಹ್ನೆಗಳ ಮಿಂಚುಪಟ್ಟಿಗಳನ್ನು ತೋರಿಸಿ ಅವುಗಳನ್ನು ಗುರುತಿಸಿ ಹೆಸರಿಸುವಂತೆ ವಿದ್ಯಾರ್ಥಿಗಳಿಗೆ ಹೇಳುವುದು.<br>* ಲೇಖನ ಚಿಹ್ನೆಗಳ ಚಾರ್ಟನ್ನು ತಯಾರಿಸುವುದು.</td></tr>
</table>

| | | | | |
|---|---|---|---|---|
| 26 | | ವಾಕ್ಯಗಳಲ್ಲಿ ಸೂಕ್ತ ಲೇಖನ ಚಿಹ್ನೆಯನ್ನು ಬಳಸುತ್ತಾರೆ. | ಲೇಖನ ಚಿಹ್ನೆ – ಬಳಸು ಚಿನ್ನ | * ಶಿಕ್ಷಕರು ವಿದ್ಯಾರ್ಥಿಗಳಿಗೆ ಲೇಖನ ಚಿಹ್ನೆ ಇಲ್ಲದ ವಾಕ್ಯಗಳನ್ನು ನೀಡುವುದು. ಸೂಕ್ತ ಸ್ಥಳದಲ್ಲಿ ಸೂಕ್ತ ಲೇಖನ ಚಿಹ್ನೆಯನ್ನು ಹಾಕಲು ಮಕ್ಕಳಿಗೆ ತಿಳಿಸುವುದು.<br>* ನಿರ್ದಿಷ್ಟ ಲೇಖನ ಚಿಹ್ನೆಯನ್ನು ಬಳಸಿ ವಾಕ್ಯವನ್ನು ರಚಿಸಲು ಸೂಚಿಸುವುದು.<br>ಉದಾ : ಪ್ರಶ್ನಾರ್ಥಕ ಚಿಹ್ನೆಯನ್ನೊಳಗೊಂಡ ವಾಕ್ಯ ರಚಿಸು<br>ನಿನ್ನ ಹೆಸರೇನು?<br>ಅವನು ಇಲ್ಲಿಗೆ ಏಕೆ ಬಂದಿದ್ದಾನೆ? |
| 27 | ಭಾಷಾಂಶಗಳನ್ನುಅರಿತುಕೊಳ್ಳುವರು. | ವರ್ಣಮಾಲೆಯ ವರ್ಗೀಕರಣವನ್ನು ತಿಳಿದುಕೊಳ್ಳುವರು. | ವರ್ಣಮಯ ವರ್ಣಮಾಲೆ | * ವರ್ಣಮಾಲೆಯ ವಿಭಾಗವನ್ನು ಒಳಗೊಂಡ ಚಾರ್ಟನ್ನು ತಯಾರಿಸಿ, ವಿದ್ಯಾರ್ಥಿಗಳಿಗೆ ವರ್ಣಮಾಲೆಯ ವಿಭಾಗಗಳ ಬಗ್ಗೆ ಅಗತ್ಯ ವಿವರಣೆಯನ್ನು ನೀಡುವುದು.<br>* ವರ್ಣಮಾಲೆಯ ಅಕ್ಷರಗಳ ಮಿಂಚುಪಟ್ಟಿಗಳನ್ನು ವಿದ್ಯಾರ್ಥಿಗಳಿಗೆ ನೀಡಿ, ಆ ಅಕ್ಷರಗಳನ್ನು ಅವುಗಳ ವಿಭಾಗಕ್ಕೆ ಅನುಗುಣವಾಗಿ ಜೋಡಿಸುವ ಚಟುವಟಿಕೆಯನ್ನು ಮಾಡಿಸುವುದು. |
| 28 | | ಏಕವಚನ ಮತ್ತು ಬಹುವಚನ ರೂಪಗಳನ್ನು ತಿಳಿದುಕೊಳ್ಳುವರು. | ಏಕ - ಅನೇಕ | * ಏಕವಚನ ಪದಗಳು ಬಹುವಚನವಾಗಿ ಬದಲಾಗುವ ಸಂದರ್ಭದಲ್ಲಿ ಆಗುವ ವ್ಯತ್ಯಾಸವನ್ನು ಪರಿಚಯಿಸುವುದು.<br>ಉದಾ : ಮಗು – ಮಕ್ಕಳು, ಮರ – ಮರಗಳು, ಪುರುಷ – ಪುರುಷರು<br>* ಕೆಲವು ಏಕವಚನ ಪದಗಳನ್ನು ನೀಡಿ ಅವುಗಳ ಬಹುವಚನ ರೂಪವನ್ನು ವಿದ್ಯಾರ್ಥಿಗಳಿಂದ ಬರೆಸುವುದು. |

| | | | | |
|---|---|---|---|---|
| 29 | | ಅನ್ಯಲಿಂಗ ರೂಪವನ್ನು ತಿಳಿಯುತ್ತಾರೆ. | ಪದಕ್ಕೊಂದು ವಾಕ್ಯ | * ಮೂರು ಲಿಂಗಗಳಿಗೆ ಸಂಬಂಧಿಸಿದಂತೆ ತರಗತಿಯ ವಿದ್ಯಾರ್ಥಿಗಳನ್ನು ಮೂರು ಪ್ರತ್ಯೇಕ ಗುಂಪುಗಳನ್ನಾಗಿ ರಚಿಸುವುದು.<br>ಕೆಲವು ಕ್ರಿಯಾಪದಗಳನ್ನು ನೀಡಿ, ಆ ಕ್ರಿಯಾಪದವನ್ನು ಬಳಸಿಕೊಂಡು ಆಯಾ ಗುಂಪಿನವರು ತಮ್ಮ ಗುಂಪಿಗೆ ಸಂಬಂಧಿಸಿದಂತೆ ಅರ್ಥಪೂರ್ಣ ವಾಕ್ಯ ರಚಿಸಿ ಓದುವಂತೆ ತಿಳಿಸುವುದು. |
| 30 | ಜೀವನ  ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವರು. | ನಾಡು-ನುಡಿಯನ್ನು ಕುರಿತು ಪ್ರಶಂಸೆಯನ್ನು ವ್ಯಕ್ತಪಡಿಸುತ್ತಾರೆ. | ನಾಡಭಕ್ತಿಗೀತೆ/ದೇಶಭಕ್ತಿಗೀತೆಗಳನ್ನುಹಾಡಿಸುವುದು | * ನಾಡು-ನುಡಿಯ ವರ್ಣನೆ ಇರುವ ಹಾಡುಗಳನ್ನು ಕೇಳಿಸುವುದು/ಹಾಡಿಸುವುದು.<br>* ವಿದ್ಯಾರ್ಥಿಗಳು ನಾಡಭಕ್ತಿಗೀತೆಯಲ್ಲಿ ತಾವು ಮೆಚ್ಚಿದ ಅಂಶಗಳನ್ನು ಹೇಳಿಸುವುದು. |
| | | ಗೌರವಸೂಚಕ ಪದಗಳನ್ನು ತಮ್ಮ ದೈನಂದಿನ ಸಂಭಾಷಣೆಯಲ್ಲಿ ಬಳಸುವುದನ್ನು ಕಲಿಯುವರು | ಹಿರಿಯ – ಕಿರಿಯ | * ವಿದ್ಯಾರ್ಥಿಗಳಿಗೆ ಹಿರಿಯ – ಕಿರಿಯ, ಶಿಕ್ಷಕ – ವಿದ್ಯಾರ್ಥಿ, ತಂದೆ – ಮಗ  ಈ ರೀತಿಯ ಪಾತ್ರಗಳನ್ನು ನೀಡಿ ಸೂಕ್ತ ಗೌರವ ಸಂಭೋಧನೆಯೊಂದಿಗೆ ಸಂಭಾಷಣೆ ಮಾಡುವಂತೆ ಮಾರ್ಗದರ್ಶಿಸುವುದು. |